Venkatappa Art Gallery Forum

# ವೆಂಕಟಪ್ಪ ಆರ್ಟ್ ಗ್ಯಾಲರಿ ಫೋರಂ (ವ್ಯಾಗ್ ಫೋರಂ)

**ದಿನಾಂಕ: ಬುಧವಾರ ೨೮ನೇ ನವೆಂಬರ್ ೨೦೧೮**

## : ಪತ್ರಿಕಾ ಪ್ರಕಟಣೆ:

**ವಿಷಯ:**

**ವೆಂಕಟಪ್ಪ ಆರ್ಟ್ ಗ್ಯಾಲರಿ (ವಿ.ಎ.ಜಿ)ಯನ್ನು ಕೆಡವಿ, ಪುನರ್ ನಿರ್ಮಾಣ ಮಾಡುವ ಕುರಿತಾದ ಸರ್ಕಾರದ ಯೋಜನೆಯ ಕುರಿತಂತೆ ಕರ್ನಾಟಕ ಸರ್ಕಾರಕ್ಕೆ ದೃಶ್ಯಕಲಾ ಸಮೂಹದಿಂದ ಒಂದು ಮನವಿ**

**ಪ್ರತಿಗಳು:**

೧. **ಕನ್ನಡ ಮತ್ತು ಸಂಸ್ಕೃತಿ ವಿಭಾಗ,**
೨. **ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ಇಲಾಖೆ**
೩. **ಪ್ರವಾಸೋದ್ಯಮ ಇಲಾಖೆ**

ಪ್ರವಾಸೋಧ್ಯಮ ಸಚಿವರಾದ ಶ್ರೀ ಸಾ.ರಾ. ಮಹೇಶ್ ಅವರು ವೆಂಕಟಪ್ಪ ಕಲಾಗ್ಯಾಲರಿ (ವಿ.ಎ.ಜಿ)ಯನ್ನು ಕೆಡವಿ, ಪುನರ್ ನಿರ್ಮಾಣ ಮಾಡುವ ಹೇಳಿಕೆ ನೀಡುವುದರ ಮೂಲಕ ಕರ್ನಾಟಕ ಸರ್ಕಾರದಿಂದ ಮತ್ತೊಮ್ಮೆ ಕರ್ನಾಟಕದ ದೃಶ್ಯಕಲಾವಿದರುಗಳಿಗೆ ಅಚ್ಚರಿಯನ್ನುಂಟು ಮಾಡಿದ್ದಾರೆ. ಕಟ್ಟಡ ನಿರ್ಮಾಣದ ತಾಂತ್ರಿಕ ನಿಪುಣರನ್ನು ಹಾಗೂ ಕಲಾವಲಯದ ಪ್ರಮುಖರನ್ನು ಸಂಪರ್ಕಿಸಿ ಚರ್ಚಿಸುವ ಗೋಜಿಗೇ ಹೋಗದೆ, ಪ್ರಜಾಪ್ರಭುತ್ವವಾದಿ ಸಂಪ್ರದಾಯ ಹಾಗೂ ಮೌಲ್ಯಗಳಿಗೆ ತಮ್ಮಲ್ಲಿ ತಾವಿಲ್ಲ ಎಂದಂತಾಗಿದೆ. ಇತ್ತೀಚೆಗೆ ಕಲಾವಲಯದ ಕೆಲವು ಕಲಾವಿದರುಗಳು ವೆಂಕಟಪ್ಪ ಗ್ಯಾಲರಿಯಲ್ಲಿ ಭೇಟಿ ಮಾಡಿ ಈ ಅಮೂಲ್ಯವಾದ, ಏಕೈಕ ಸಾರ್ವತ್ರಿಕ, ಸಾರ್ವಜನಿಕ ಸರ್ಕಾರಿ ಸಂಗ್ರಹಾಲಯವನ್ನು ಕಲಾವಿದರಿಂದ ಹಾಗೂ ಜನಸಾಮಾನ್ಯರಿಂದ ದೂರವಾಗಿಸುವ ಈ ಅವಸರದ ಯತ್ನವನ್ನು ತಡೆಹಿಡಿಯುವುದು ಹೇಗೆ ಎಂದು ಚರ್ಚಿಸಲಾಯಿತು.

ನಿರ್ಮಾಣವಾದಂದಿನಿಂದಲೂ (೧೯೭೪) ಕರ್ನಾಟಕ ಸರ್ಕಾರದ ಮೇಲುಸ್ತುವಾರಿಯಲ್ಲಿರುವ, ಅದೇ ಕಾರಣಕ್ಕೆ ಅತ್ಯಂತ ಕಡಿಮೆ ಬಾಡಿಗೆಯ ಕಲಾಗ್ಯಾಲರಿ ವೆಂಕಟಪ್ಪ ಗ್ಯಾಲರಿ. ಸಮಗ್ರ ಭಾರತೀಯ ಕಲಾವಿದರೆಲ್ಲರೂ ಈ ಸೌಕರ್ಯದ ಉಪಯೋಗ ಹಾಗೂ ಲಾಭ ಪಡೆಯುತ್ತ ಬಂದಿರುತ್ತಾರೆ. ಈ ಸಂಗ್ರಹಾಲಯ/ಗ್ಯಾಲರಿಯ ಏಳಿಗೆಗಾಗಿ ಉಂಟಾದ ಯೋಜನೆಗಳಲ್ಲೆಲ್ಲ ಕಲಾವಿದ ಸಮೂಹವು ಆರಂಭದಿಂದಲೂ ಸರ್ಕಾರದೊಂದಿಗೆ ಕೈಜೋಡಿಸುತ್ತ ಬಂದಿರುತ್ತದೆ. **ಕೆಲವು ವರ್ಷಗಳ ಹಿಂದೆ ಈ ಗ್ಯಾಲರಿಯನ್ನು ಖಾಸಗಿಯವರಿಗೆ ಸರ್ಕಾರವು ಪರಬಾರೆ ಮಾಡುವ ಯತ್ನದ ವಿರುದ್ಧ ಕಲಾಸಮುದಾಯ ಹಾಗೂ ಸಾರ್ವಜನಿಕರು ಪ್ರತಿಭಟಿಸಿ, ವಿರೋಧಿಸಿ, ಯಥಾಸ್ಥಿತಿಯನ್ನು ಕಾಯ್ದಿರಿಸಿದ್ದು ಜನಮಾನಸದಿಂದ ಇನ್ನೂ ಮಾಸಿಲ್ಲ**. ಕರ್ನಾಟಕ ಕಲಾಸಮುದಾಯದಿಂದ ಭಾರತೀಯ ಕಲೆಗೆ ಕಲಾವಿದರಿಗೆ ಅಪೂರ್ವ ಕೊಡುಗೆಯಾದ ವೆಂಕಟಪ್ಪ ಗ್ಯಾಲರಿಯು ಸರ್ಕಾರದ ಸುಪರ್ದಿಯಲ್ಲೇ ಇರಬೇಕೆಂಬ ನಿಲುವು ಅತ್ಯಂತ ಸ್ಪಷ್ಟವಾಗಿದೆ. ಸರ್ಕಾರಕ್ಕೆ ಕಾಲಕಾಲಕ್ಕೆ ಇದಕ್ಕೆ ಪೂರಕವಾದ ಭಿನ್ನಹ ಹಾಗೂ ಪ್ರತಿಭಟನೆಯನ್ನು ನಡೆಸುತ್ತಲೇ ಬಂದಿರುತ್ತದೆ. ಈ ಗ್ಯಾಲರಿಯನ್ನು

ಸುಸ್ಥಿತಿಯಲ್ಲಿರಿಸಬೇಕೆಂದು, ಸೂಕ್ತವಾಗಿ ದೈನಂದಿನ ಮೇಲ್ವಿಚಾರಣೆ ಇರಬೇಕೆಂದು ನಿರಂತರವಾಗಿ ಸರ್ಕಾರವನ್ನು ಒತ್ತಾಯಿಸುತ್ತಲೇ ಇದೆ ಕೂಡ. ವೆಂಕಟಪ್ಪ ಕಲಾಗ್ಯಾಲರಿಯ ತತ್ವವನ್ನು ಉಳಿಸಿಕೊಳ್ಳುವಲ್ಲಿ ಕಲಾವಿದರೊಂದಿಗೆ ಸಂವಾದಿಸಲು ಸರ್ಕಾರವು ಕಿವಿಗೊಡಬೇಕಾದ ಸೂಕ್ತ ಸಮಯ ಇದಾಗಿದೆ.

**ತತ್‌ಕ್ಷಣದಲ್ಲಿ ಉದ್ದೇಶಿಸಬೇಕಿರುವ ವಿಷಯಗಳು**:

- **ವ್ಯಾಗ್ (ವೆಂಕಟಪ್ಪ ಆರ್ಟ್ ಗ್ಯಾಲರಿ)** ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಡಿಯ ಪ್ರಾಚ್ಯವಸ್ತು ಹಾಗೂ ಸಂಗ್ರಹಾಲಯಗಳ ಇಲಾಖೆಗೆ ಸೇರಿದ್ದಾಗಿದೆ. **ಆದರೂ, ಮತ್ತೆ ಮತ್ತೆ ಪ್ರವಾಸೋದ್ಯಮ ಇಲಾಖೆಯು ಏಕೆ ವ್ಯಾಗ್ ಕುರಿತು ನಿರ್ಧಾರಗಳನ್ನು, ಹೇಳಿಕೆಗಳನ್ನು ನೀಡುತ್ತಿದೆ**? ಇದನ್ನು ಕುರಿತು ಕರ್ನಾಟಕ ಸರ್ಕಾರದ ಈ ಇಲಾಖೆಗಳ ಮುಖ್ಯಸ್ಥರಾದ ಸಂಸ್ಕೃತಿ ಸಚಿವರು ಮೌನ ವಹಿಸಿರುವುದೇಕೆ?

- ಪ್ರಜಾಪ್ರಭುತ್ವವಾದಿ ನೆಲೆಯಲ್ಲಿ ಪರಿಗಣಿಸಿದಲ್ಲಿ, ತಾಂತ್ರಿಕ ತಜ್ಞರ ಸಲಹೆಯನ್ನು ಕೇಳಿ ತದನಂತರ ನಿರ್ಧಾರಗಳನ್ನು ಪ್ರಕಟಿಸುವುದು ರೂಢಿ. **ವ್ಯಾಗ್ ಕಟ್ಟಡವನ್ನು ಕೆಡವುವ ನಿರ್ಧಾರದ ಹೇಳಿಕೆ ನೀಡುವ ಮುನ್ನ ತಾಂತ್ರಿಕ ತಜ್ಞರನ್ನು ಏಕೆ ಸಂಪರ್ಕಿಸಿ ಚರ್ಚಿಸಿಲ್ಲ**? ಸುತ್ತಲಿನ ನೀರಿನ ಕಟ್ಟೆ ಇರುವ ಕಾರಣದಿಂದ ವ್ಯಾಗ್ ಗ್ಯಾಲರಿಯು ಕುಸಿಯುತ್ತಿದೆ ಎಂದು ತಮ್ಮ ಮೊದಲ ಭೇಟಿಯಲ್ಲೇ ಪ್ರವಾಸೋದ್ಯಮ ಸಚಿವರು ನಿರ್ಧರಿಸಿದ್ದಾದರೂ ಹೇಗೆ ಮತ್ತು ಏಕೆ? ಇದರಿಂದ ತಿಳಿಯುವುದೇನೆಂದರೆ, ಆ ಭೇಟಿಯು ನೆಪಮಾತ್ರವಾಗಿದ್ದು, ಮತ್ಯಾವುದೋ ವ್ಯಕ್ತಿಗತ ಖೂಳ ಯೋಜನೆಯ ನೆಪದಿಂದ ವ್ಯಾಗನ್ನು ಕೆಡವಬೇಕೆಂಬ ನಿರ್ಧಾರವು ಪೂರ್ವ ನಿಶ್ಚಿತವಾಗಿತ್ತೆಂದು ಅರಿವಾಗುತ್ತದೆ.

- ವೆಂಕಟಪ್ಪ ಗ್ಯಾಲರಿ ಕುರಿತಾದ ಇತ್ತೀಚಿನ ಸರ್ಕಾರದ ಹೇಳಿಕೆಗಳ ಹಿನ್ನೆಲೆಯಲ್ಲಿ, ಹಿನ್ನೆಲೆಯನ್ನು ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು ಹಾಗೂ ಸಂಗ್ರಹಾಲಯಗಳ ಸಚಿವಾಲದ ಕೇಂದ್ರವಾದ ಕನ್ನಡ ಮತ್ತು ಸಂಸ್ಕೃತಿ ಸಚಿವಾಲಯದ ಮುಖ್ಯಸ್ಥರಾದ ಸಂಸ್ಕೃತಿ ಸಚಿವರೇ ಪರಿಗಣಿಸಬೇಕಾಗುತ್ತದೆ. ವೆಂಕಟಪ್ಪ ಗ್ಯಾಲರಿಯ ಗೋಡೆಗಳಲ್ಲಿ ಬಿರುಕು ಉಂಟಾಗಿದೆ ಅಥವ ಅದು ಸರಿಪಡಿಸಲಾಗದ ಸ್ಥಿತಿಯಲ್ಲಿದೆ ಎಂದು ನಿರ್ಧರಿಸುವುದು ಪ್ರವಾಸೋದ್ಯಮದ ಕೆಲಸವಲ್ಲ. **ಇದೇ ಪ್ರವಾಸೋದ್ಯಮ ಇಲಾಖೆಯು ಖಾಸಗಿಯವರಿಗೆ ಅನಿಯಮಿತಾವಧಿಯ ಕಾಲ ಈ ಸರ್ಕಾರದ ಸ್ವತ್ತನ್ನು ಪರಬಾರೆ ಮಾಡಿಬಿಡಲು ತುದಿಗಾಲಲ್ಲಿ ನಿಂತಿತ್ತು, ಕೆಲವೇ ವರ್ಷಗಳ ಹಿಂದೆ**. **ಪ್ರಾಯಶ: ಆಗ ಈ ಕಟ್ಟಡವು ಸಾಕಷ್ಟು ಸುಸ್ಥಿತಿಯಲ್ಲಿತ್ತು ಎಂದು ಅವರೇ ಒಪ್ಪಿದಂತಾಗಲಿಲ್ಲವೆ**?

- ವೆಂಕಟಪ್ಪ ಗ್ಯಾಲರಿಯನ್ನು ನಿರ್ದಿಷ್ಟ ಉದ್ದೇಶಕ್ಕಾಗಿ ನಿರ್ಮಿಸಲಾಗಿತ್ತು. ಕಲಾವಿದ, ವರ್ಣಶಿಲ್ಪಿ ಕೆ. ವೆಂಕಟಪ್ಪನವರ ಕೃತಿಗಳನ್ನು ಶಾಶ್ವತವಾಗಿ ಪ್ರದರ್ಶಿಸಲು ನಿರ್ಮಿಸಲಾಗಿದ್ದ ಕಟ್ಟಡವಿದು. ಜೊತೆಗೆ, ಆಧುನಿಕ ಹಾಗೂ ಸಮಕಾಲೀನ ಕರ್ನಾಟಕದ ಕಲಾವಿದರುಗಳು ನಿಯಮಿತವಾಗಿ ತಮ್ಮ ಕಲಾಕೃತಿಗಳ ಪ್ರದರ್ಶನ ಏರ್ಪಡಿಸಲು ಹಾಗೂ ಕಲಾಚಟುವಟಿಕೆಗಳು ನಿಯಮಿತವಾಗಿ ನಡೆಯಲು ವ್ಯವಸ್ಥೆ ಮಾಡಲಾಗಿತ್ತು. ಆದ್ದರಿಂದ, ಈ ಕಟ್ಟಡದ ವ್ಯವಸ್ಥೆ ಕುರಿತು ಯಾವುದೇ ನೀತಿ ನಿಯಮಗಳಲ್ಲಿ ಬದಲಾವಣೆ, ಮಾರ್ಪಾಡುಗಳನ್ನು ಮಾಡುವಾಗ ಕಲಾಸಮುದಾಯವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದು ಅನಿವಾರ್ಯ ಎಂಬುದು ಸಾಮಾನ್ಯ ಜ್ಞಾನವಷ್ಟೇ. **ಈ ಹಿನ್ನೆಲೆಯಲ್ಲಿ, ಈ ಕಟ್ಟಡವನ್ನು ಕುರಿತು ದಿಢೀರನೆ ಪತ್ರಿಕಾ ಪ್ರಕಟಣೆ ನೀಡುವ ಮುನ್ನ ಕರ್ನಾಟಕ ಸರ್ಕಾರವು ಕಲಾಸಮುದಾಯವನ್ನು ಏಕೆ ಸಂಪರ್ಕಿಸಲಿಲ್ಲ**? ಕನ್ನಡದ ಕಲಾವಿದರ ಬಗ್ಗೆ ಸರ್ಕಾರಕ್ಕೆ ಇರುವ ಆಸಡ್ಡೆಗೆ ಇದು ಸಾಕ್ಷಿಯಾಗಿದೆ.

- ನಿಯಮಿತವಾಗಿ ಈ ಕಟ್ಟಡಕ್ಕೆ ಭೇಟಿ ನೀಡುವ, ಪ್ರದರ್ಶಿಸುವ ಕಲಾವಿದರುಗಳಿಗೆ ಈ ಕಟ್ಟಡದಲ್ಲಿ ಯಾವುದೇ ಗುರುತರವಾದ ಬಿರುಕು ಕಂಡುಬರುತ್ತಿಲ್ಲ. ಅಲ್ಲಲ್ಲಿ ನೀರು ಸೋರುತ್ತಿರುವುದು ಇದೇ ಮುಂತಾದ ಸಣ್ಣಪುಟ್ಟ ತೊಡರುಗಳಷ್ಟೇ ಈ ಕಟ್ಟಡವನ್ನು ಸುಸ್ಥಿತಿಯಲ್ಲಿಡುವಲ್ಲಿ ಸರ್ಕಾರದ ಆಸಡ್ಡೆಯ ಗುರ್ತುಗಳಷ್ಟೇ ಕಂಡುಬರುತ್ತಿದೆ. ಅಭಿಯಂತರರ ಅಭಿಪ್ರಾಯ, ನಿಯಮಿತವಾಗಿ ಮೇಲುಸ್ತುವಾರಿ ವಹಿಸಿಕೊಳ್ಳುವ ಕೆಲವು ನಿರ್ಧಾರಗಳು ಈ ಕಟ್ಟಡವನ್ನು ಯಥಾಸ್ಥಿತಿಯಲ್ಲಿ ಕಾಪಾಡಿಕೊಳ್ಳಲು ಬೇಕಾಗಿದೆಯಷ್ಟೇ. ಸುತ್ತಲಿನ ನೀರು ಕಟ್ಟಡದ ಅಡಿಪಾಯಕ್ಕೆ ಎರವಾಗದಂತೆ ಎಚ್ಚರವಹಿಸುವುದಷ್ಟೇ ಈಗ ಬೇಕಿರುವುದು. ಆದ್ದರಿಂದ, **ಇಡಿಯ ಕಟ್ಟಡ**

**ಸಮುಚ್ಛಯವನ್ನೇ ಬೀಳಿಸಿ ಪುನರ್ ನಿರ್ಮಾಣ ಮಾಡಿಬಿಡುವ ಸರ್ಕಾರದ ಅವಸರದ ನಿರ್ಧಾರದಿಂದ ಮತ್ತೇನೋ ವ್ಯಕ್ತಿಗತ ಉದ್ದೇಶಗಳ ಸುಳಿವು ಸ್ಪಷ್ಟವಾಗುತ್ತದೆ**.

- ಮೂಲತಃ ವೆಂಕಟಪ್ಪ ಗ್ಯಾಲರಿಯು ಐದು ಅಂತಸ್ತಿನ ಕಟ್ಟಡವಾಗಬೇಕಿದ್ದು, ಈಗ ನೆಲ ಮತ್ತು ಎರಡು ಅಂತಸ್ತನ್ನು ಒಳಗೊಂಡಿದೆ (ನೋಡಿ: http://www.karnatakaarchaeology.gov.in/sri-k-venkatappa-art-gallery-bangalore/) **ಐದಂತಸ್ತಿನ ಕಟ್ಟಡವನ್ನು ಆರಂಭದಲ್ಲೇ ಯೋಜಿಸಲಾಗಿರುವುದರಿಂದ, ಅಡಿಪಾಯವನ್ನು ಖಂಡಿತವಾಗಿಯೂ ಆ ವಿನ್ಯಾಸದ ಪ್ರಕಾರವೇ ಹಾಕಲಾಗಿರುತ್ತದೆಯಷ್ಟೇ**. ಈಗ ಎರಡು ಅಂತಸ್ತುಗಳನ್ನು ಹೊಂದಿರುವ ಕಟ್ಟಡವೇ ಅಪಾಯದಲ್ಲಿದೆ ಎನ್ನುವುದಾದರೆ, ಇದನ್ನು ಮೊದಲಿಗೆ ನಿರ್ಮಿಸಿದ ರಾಜ್ಯದ ಪಿ.ಡಬ್ಲ್ಯು.ಡಿ ವಿಭಾಗವು ಪ್ರಶ್ನಾತೀತವಾಗಿ ಹೇಗೆ ಉಳಿಯಬಲ್ಲದು?

- ಪ್ರವಾಸೋದ್ಯಮ ಇಲಾಖೆಯ ಸಚಿವಾಲಯದ ಹೇಳಿಕೆಯು **ವ್ಯಾಗ್** ಉದ್ದೇಶಕ್ಕೆ ವಿರುದ್ಧವಾದುದಾಗಿದೆ. ವೆಂಕಟಪ್ಪ ಗ್ಯಾಲರಿಯನ್ನು ಕೆಡವಿ, ಪುನರ್ ನಿರ್ಮಿಸಿದ ನಂತರ, ಸರ್ಕಾರದ ಸಂಗ್ರಹಾಲಯದ ಐವತ್ತು (೫೦) ಲಾಕರ್‌ಗಳಲ್ಲಿರುವ ಐತಿಹಾಸಿಕ ಕಲಾಕೃತಿಗಳನ್ನು ಮುಂದೆ ನಿರ್ಮಿಸಲಾಗುವ ಒಂದೇ ಅಂತಸ್ತಿನಲಿರಿಸಲು ಹೇಗೆ ಸಾಧ್ಯವಾಗಬಲ್ಲದು? **ಕರ್ನಾಟಕ ಸರ್ಕಾರವು ಮರೆಯಬಾರದ ಒಂದು ಅಂಶವೆಂದರೆ, ವೆಂಕಟಪ್ಪ ಕಲಾಗ್ಯಾಲರಿಯು ಆಧುನಿಕ ಹಾಗೂ ಸಮಕಾಲೀನ ಕಲೆಗಳ ಗ್ಯಾಲರಿ/ಸಂಗ್ರಹಾಲಯವೇ ಹೊರತು ಸರ್ಕಾರದ ಸಂಗ್ರಹಾಲಯ ಹಾಗೂ ಅದರೊಳಗಿನ ಐತಿಹಾಸಿಕ ಪಳೆಯುಳಿಕೆಗಳ ಮುಂದುವರೆದ ಭಾಗವಲ್ಲ ಎಂಬ ಅಂಶ**.

- **ದೃಶ್ಯ ಕಲಾವಿದರುಗಳು ಸ್ವಾಭಿಮಾನವನ್ನು ಉಳಿಸಿಕೊಂಡು, ಇಂತಹ ಪ್ರಜಾಪ್ರಭುತ್ವವಾದಿ ಸ್ಥಳದ ಉಳಿವಿಗಾಗಿ ಪ್ರತಿಭಟಿಸುವುದು ಸಮಂಜಸವಲ್ಲವೆ**?

**<u>ಕಲಾಸಮುದಾಯದ ಬೇಡಿಕೆ ಹಾಗೂ ಒತ್ತಾಯಿಸುವ ಅಂಶಗಳು</u>**:

- ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು (ವೆಂಕಟಪ್ಪ ಗ್ಯಾಲರಿಯನ್ನು ಒಳಗೊಂಡಿರುವ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ಇಲಾಖೆಯ ಮಾತೃ ವಿಭಾಗ) ಕರ್ನಾಟಕದ ದೃಶ್ಯಕಲಾವಿದರುಗಳ ಹಕ್ಕುಗಳನ್ನು **ಇರುವಂತೆಯೇ ಉಳಿಸಬೇಕಿದೆ**. ಕರ್ನಾಟಕದ ಕಲಾವಿದರುಗಳ ವೈವಿಧ್ಯಮಯ, ಪ್ರಜಾಪ್ರಭುತ್ವವಾದಿ ಸ್ಥಳವನ್ನು ಸ್ವತಃ ಈ ಇಲಾಖೆಯೇ ಉಳಿಸಿ, ವ್ಯಾಗ್ ಸ್ಥಳದ ಸ್ವಾಯತ್ತತೆಯನ್ನು ಕಾಪಾಡಲಿ.

- ಪ್ರಾಚ್ಯವಸ್ತು ಹಾಗೂ ಸಂಗ್ರಹಾಲಯ ಇಲಾಖೆಯಡಿಯಲ್ಲಿ ವೆಂಕಟಪ್ಪ ಗ್ಯಾಲರಿಯು ಬರುವುದರಿಂದ, ಇದರ ವಾರ್ಷಿಕ ಮೇಲುಸ್ತುವಾರಿಯ ಖರ್ಚನ್ನು ಅದರೊಂದಿಗೆ ಹಂಚಿಕೊಳ್ಳಬೇಕಿದೆ. ನಿರ್ದಿಷ್ಟವಾಗಿ ವೆಂಕಟಪ್ಪ ಗ್ಯಾಲರಿಗೆ ತಗಲುವ ಪ್ರತ್ಯೇಕ ವೆಚ್ಚದ ಸ್ಪಷ್ಟ ಚಿತ್ರಣವಿರುವುದಿಲ್ಲ. **ಈಗ ಈ ಗ್ಯಾಲರಿಗೆ ಅಗತ್ಯವಿರುವ ಖರ್ಚುವೆಚ್ಚವು ಪ್ರತ್ಯೇಕವಾಗಿರುವುದು ಅಗತ್ಯವಾಗಿದೆ**.

- ವೆಂಕಟಪ್ಪ ಗ್ಯಾಲರಿಗೆ ಅದರದ್ದೇ ಆದ ಸ್ವಂತ ಸಿಬ್ಬಂದಿಯೂ ಇರುವುದಿಲ್ಲ. ಕಲೆಯ ಹಿನ್ನೆಲೆಯನ್ನು ಹೊಂದಿರುವ ಸಿಬ್ಬಂದಿಯ ಅಗತ್ಯ ಅತ್ಯಂತ ಅವಶ್ಯಕವಾಗಿದೆ. ಕ್ಯುರೇಟರ್ ಮತ್ತು ಪ್ರದರ್ಶನ ಅಧಿಕಾರಿಗಳಿಗೆ, ಕಲಾಸಂಸ್ಕರಣಕ್ಕೆ ಮತ್ತು ಪ್ರದರ್ಶನ ಏರ್ಪಡಿಸಲು **ಕಲೆಯ ವಿಶಿಷ್ಟ ಜ್ಞಾನವು ಅನಿವಾರ್ಯ** ಕೂಡ. ತತ್‌ಕ್ಷಣದಲ್ಲಿ ಆಗಬೇಕಿರುವ ಕೆಲಸವೆಂದರೆ ವ್ಯಾಗ್ ನಲ್ಲಿ ನಡೆಯುವ ಕಲಾಪ್ರದರ್ಶನ ಹಾಗೂ ಕಲಾಚಟುವಟಿಕೆಗಳ ಮೇಲುಸ್ತುವಾರಿ ವಹಿಸಿಕೊಳ್ಳಲು ಕಲೆಯ ಹಿನ್ನೆಲೆಯ ಕ್ಯುರೇಟರ್ ಒಬ್ಬರ ನೇಮಕ ಅಗತ್ಯವಾಗಿ ಬೇಕಾಗಿರುತ್ತದೆ.

- ವೆಂಕಟಪ್ಪ ಗ್ಯಾಲರಿಯು ೧೯೭೦ರ ದಶಕದಲ್ಲಿ ಆರಂಭವಾದಂದಿನಿಂದ, ಅನೇಕ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಕಲಾಚಟುವಟಿಕೆಗಳಿಗೆ ತಾಣವಾಗಿದೆ. ದೇಶವಿದೇಶದ ಕಲಾವಿದರುಗಳು ಇಲ್ಲಿ ಬಂದು, ಈ ಜಾಗದ ಸಾಂಸ್ಕೃತಿಕ ಲಾಭ

ಪಡೆದಿರುತ್ತಾರೆ. ಇದು ಕೇಂದ್ರ ಭಾಗದಲ್ಲಿದ್ದು, ಆರ್ಥಿಕವಾಗಿ ಕೈಗೆಟುಕುವಂತಿದ್ದು, ಪ್ರಜಾಪ್ರಭುತ್ವವಾದಿ ತಾಣವಾಗಿದೆ. ಈ ಗ್ಯಾಲರಿಯನ್ನು ಕಾಲಕಾಲಕ್ಕೆ ಸುಸ್ಥಿತಿಯಲ್ಲಿಡುವುದು ಸಹಜ ಅಗತ್ಯವಾಗಿದೆ ಮತ್ತು ಕಲಾವಿದ ಸಮುದಾಯವು ಅಂತಹ ಕ್ರಿಯೆಯನ್ನು ಸ್ವಾಗತಿಸುತ್ತಲೇ ಬಂದಿರುತ್ತಾರೆ. ಈ ಗ್ಯಾಲರಿಯನ್ನು ಸುಸ್ಥಿತಿಯಲ್ಲಿಡುವ ಏಕೈಕ ಮಾರ್ಗವೆಂದರೆ ಕಲಾವಿದರುಗಳು ಹಾಗೂ ಸಂಬಂಧಪಟ್ಟ ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳ ಪ್ರತಿನಿಧಿಗಳು ಒಟ್ಟಿಗೆ ಕಾಲಕಾಲಕ್ಕೆ ಚರ್ಚಿಸಿ ಸೂಕ್ತ ಮಾರ್ಪಾಡುಗಳನ್ನು ಮಾಡುವುದಾಗಿರುತ್ತದೆ.

- ಅನುಮಾನಾತೀತವಾಗಿ ವೆಂಕಟಪ್ಪ ಗ್ಯಾಲರಿಗೆ ತತ್‌ಕ್ಷಣದ ಕೆಲವು ಬದಲಾವಣೆಗಳ, ಮಾರ್ಪಾಡುಗಳ ಅಗತ್ಯವಿದೆ. ಇಡಿಯ ಕಟ್ಟಡವು ಪ್ರಸ್ತುತ ಆಸಡ್ಡೆಗೊಳಗಾಗಿದೆ. ಅಲ್ಲಲ್ಲಿ ದುರಸ್ತಿಯ ಅಗತ್ಯವಿದೆ, ಒಳಹೊರಗೂ ಸಹ. ಮೊದಲ ಅಂತಸ್ತಿನಲ್ಲಿರುವ, ಬಾಡಿಗೆಗೆ ಕೊಡಮಾಡಲಾಗುವ ಗ್ಯಾಲರಿ ಕೋಣೆಯ ಗೋಡೆಯ ಪ್ಲಾಸ್ಟರನ್ನು ಸಾಧ್ಯಂತವಾಗಿ ತೆಗೆದುಹಾಕಿ, ಪ್ಲಾಸ್ಟರ್‌ಬೋರ್ಡಿನಿಂದ ಆವರಿಸಬೇಕಿದೆ. ಇದನ್ನು ಇದೇ ಕಟ್ಟಡದ ಎರಡನೇ ಅಂತಸ್ತಿನಲ್ಲಿರುವ ಕಲಾವಿದ ಕೆ.ಕೆ.ಹೆಬ್ಬಾರ್ ಅವರ ಕೃತಿಗಳಿರುವ ಕೋಣೆಯಲ್ಲಿ ಈಗಾಗಲೇ ಮಾಡಲಾಗಿರುತ್ತದೆ. ವ್ಯಾಗ್ ಫೋರಂ ಈ ಕಟ್ಟಡಕ್ಕೆ ಕೂಡಲೇ ಆಗಬೇಕಿರುವ ರಿಪೇರಿಯ ಪಟ್ಟಿಯೊಂದನ್ನು ತಯಾರಿಸಿದೆ: ತಾತ್ಕಾಲಿಕವಾದ, ಸ್ಥಳಾಂತರಿಸಬಹುದಾದ ಕೃತಕ ಗೋಡೆಗಳು, ಸೂಕ್ತವಾದ ಬೆಳಕಿನ ವ್ಯವಸ್ಥೆ, ಭಿತ್ತಿಪತ್ರಗಳನ್ನು ಅಂಟಿಸಲು ಅಗತ್ಯವಿರುವ ಪ್ರದರ್ಶನ ಫಲಕಗಳು, ಕಾರ್ಯ ನಿರ್ವಹಿಸಬಲ್ಲ ಲಿಫ್ಟ್‌ಗಳು, ಹವಾನಿಯಂತ್ರಣ ವ್ಯವಸ್ಥೆ, ಫ್ಯಾನ್‌ಗಳು ಇವೇ ಮುಂತಾದ ಪ್ರಮುಖ ಮೂಲಭೂತ ಅಗತ್ಯಗಳಿವೆ. ಸಂಬಂಧಪಟ್ಟ ಸರ್ಕಾರಿ ಇಲಾಖೆಗಳಿಗೆ ಇವೆಲ್ಲವುಗಳ ಪಟ್ಟಿಯನ್ನು ನೀಡಲು ನಾವು ಸಿದ್ಧರಿದ್ದೇವೆ.

- ಅತ್ಯಮೂಲ್ಯವಾದ ಕೆ.ವೆಂಕಟಪ್ಪನವರ ಅಸಲಿ ಕಲಾಕೃತಿಗಳು ನೆಲಮಟ್ಟದ ಕಟ್ಟಡದಲ್ಲಿ ದುರವಸ್ಥೆಯಲ್ಲಿವೆ. ಈ ಕೃತಿಗಳಿಗೆ ಸೂಕ್ತವಾದ ಸಂಸ್ಕರಣ ಹಾಗೂ ಫಲಕಗಳ ಅಗತ್ಯವಿರುತ್ತದೆ.

- **ಕರ್ನಾಟಕ ಸರ್ಕಾರವು 'ಕರ್ನಾಟಕ ಕಲಾವಿದರ ಕಲಾಕೃತಿಗಳನ್ನು' ಒಂದೊಮ್ಮೆ ಸಂಗ್ರಹಿಸಿತ್ತು, ಅವುಗಳ ಎಲ್ಲಿವೆ ಎಂಬುದರ ಬಗ್ಗೆ ಕಲಾವಿದರುಗಳು ಅನೇಕ ಬಾರಿ ವಿಫಲವಾಗಿ ಪ್ರಶ್ನಿಸಿದ್ದಾಗಿದೆ**. ಒಮ್ಮೆ ಅವುಗಳನ್ನು ವ್ಯಾಗಿನಲ್ಲಿ ಪ್ರದರ್ಶಿಸಲಾಗಿತ್ತು. ಆ ಕೃತಿಗಳು ಎಲ್ಲಿವೆ, ಹಾಗೂ ಅವುಗಳನ್ನು ಏಕೆ ಶಾಶ್ವತವಾಗಿ ಪ್ರದರ್ಶಿಸಲಾಗಿಲ್ಲ? ಜಾಗದ ಕೊರತೆಯಿಂದಾಗಿ ಅವುಗಳನ್ನು ಪ್ರದರ್ಶಿಸಲಾಗಿಲ್ಲವೆ? ಈ ಮೂಲಕ ಅವುಗಳನ್ನು ಪ್ರದರ್ಶಿಸಬೇಕೆಂದೂ, ಅದಕ್ಕೆ ಸೂಕ್ತವಾದ ಜಾಗವನ್ನು ಅನುವು ಮಾಡಿಕೊಡಬೇಕೆಂದು ಕೋರುತ್ತೇವೆ.

- ನೆಲಮಟ್ಟ ಹಾಗೂ ಮೊದಲ ಅಂತಸ್ತಿನ ಕೋಣೆಗಳನ್ನು ಕಛೇರಿ ಹಾಗೂ ಶೇಖರಣೆಗಾಗಿ ಬಳಸಲಾಗುತ್ತಿದೆ. ತಮ್ಮ ಕೃತಿಗಳನ್ನು ಒಟ್ಟಾಗಿ ಪ್ರದರ್ಶಿಸಲು ಕಲಾವಿದರುಗಳಿಗೆ ಇನ್ನೂ ಹೆಚ್ಚಿನ ಚಿಕ್ಕ ಹಾಗೂ ದೊಡ್ಡ ಕೋಣೆಗಳ ಅಗತ್ಯವಿರುತ್ತದೆ. ಪ್ರಸ್ತುತದಲ್ಲಿ, ಅಷ್ಟೊಂದು ಕಛೇರಿಗಳನ್ನು, ಶೇಖರಣಾ ಕೋಣೆಗಳನ್ನು ಹೊಂದಿರುವ ವೆಂಕಟಪ್ಪ ಗ್ಯಾಲರಿಯಲ್ಲಿ, ಬಾಡಿಗೆಗೆ ಕೊಡಮಾಡುವ ಒಂದೇ ಒಂದು ಪ್ರದರ್ಶನಾಲಯವಿದ್ದು, ಅದರಲ್ಲಿ ದೊಡ್ಡ ಪ್ರದರ್ಶನವನ್ನು ಮಾತ್ರ, ಅದರಲ್ಲೂ ಒಂದೇ ಪ್ರದರ್ಶನ ಮಾಡಲು ಅವಕಾಶವಿದೆ. ಮೂಗಿಗಿಂತ ಮೂಗುತಿ ಭಾರ ಎಂಬಂತಾಗಿದೆ ಇದು. ಇದನ್ನು ಸರಿಪಡಿಸುವ ಅಗತ್ಯವಿರುತ್ತದೆ.

- ಅಸಲಿಯಾಗಿ ವಿನ್ಯಾಸಗೊಳಿಸಲಾಗಿರುವಂತೆ, ವೆಂಕಟಪ್ಪ ಗ್ಯಾಲರಿಯಲ್ಲಿ ಇನ್ನೂ ಹೆಚ್ಚಿನ ಅಂತಸ್ತುಗಳನ್ನು ಕಟ್ಟುವಲ್ಲಿ ಸರ್ಕಾರಕ್ಕೆ ಕಲಾಸಮುದಾಯವು ತಾತ್ವಿಕ, ತಾಂತ್ರಿಕ ಹಾಗೂ ಸೃಜನಶೀಲ ನೆರವು ನೀಡಲು ಸಿದ್ಧವಿದೆ. ಪ್ರಸ್ತುತದಲ್ಲಿ ಒಂದು ದೊಡ್ಡ ಕೋಣೆಯಲ್ಲಿ ವೆಂಕಟಪ್ಪನವರ ಕೃತಿಗಳು, ಮತ್ತೊಂದರಲ್ಲಿ ಹೆಬ್ಬಾರರ ಕೃತಿಗಳು ಮತ್ತೂ ಒಂದು ದೊಡ್ಡ ಕೋಣೆಯು ಬಾಡಿಗೆಗೆ ಒಂದು ಪ್ರದರ್ಶನ ಮಾತ್ರ ಏರ್ಪಡಿಸಲು ಅನುವಾಗುವಂತೆ ಮೂರು ಕೋಣೆಗಳನ್ನು ಪ್ರದರ್ಶನಕ್ಕೆ ಇರಿಸಲಾಗಿದೆ. ಮತ್ತೂ ಎರಡು ಅಂತಸ್ತನ್ನು ನಿರ್ಮಿಸುವುದು ಮತ್ತು ಈಗಾಗಲೇ ವಿಫುಲವಾಗಿ ಕಛೇರಿಗಳಿಗೆ ಬಳಸಲಾಗುತ್ತಿರುವ ಕೋಣೆಗಳನ್ನು ತೆರವು ಮಾಡುವ ಅಗತ್ಯವಿರುತ್ತದೆ. ಇದರಿಂದ, ಬೀಗ ಹಾಕಲಾದ ಕೋಣೆಗಳಲ್ಲಿ ಅಡಗಿ ಕುಳಿತಿರುವ ಕರ್ನಾಟಕ ಕಲಾವಿದರುಗಳ ಕೃತಿಗಳು ಪ್ರದರ್ಶನ ಭಾಗ್ಯವನ್ನು ಕಾಣುವಂತಾಗಿ, ಜನಸಾಮಾನ್ಯರಿಗೆ ಕರ್ನಾಟಕದ ಕಲಾವಿದರುಗಳ ಪರಿಚಯವಾಗುವ ಒಳ್ಳೆಯ ಕೆಲಸ ಆಗಲಿದೆ. ಭೌತಿಕವಾಗಿ ನಶಿಸುತ್ತಿರುವ ಕೃತಿಗಳ ಸಂಸ್ಕರಣೆಯಾಗಬೇಕಿದೆ, ಮಕ್ಕಳ ಕಲೆಯ ಪ್ರೋತ್ಸಾಹವೂ ಸಾಧ್ಯವಾಗಲಿದೆ.

ಒಟ್ಟಾರೆಯಾಗಿ ವೆಂಕಟಪ್ಪ ಗ್ಯಾಲರಿಯನ್ನು ಚಟುವಟಿಕೆಯಿಂದಿರಿಸಲು, ಇರುವ ವ್ಯವಸ್ಥೆಯಲ್ಲಿ ಸೂಕ್ತ ಮಾರ್ಪಾಡುಗಳ ಅಗತ್ಯವಿದೆಯೇ ಹೊರತು ಒಟ್ಟಾರೆ ಕಟ್ಟಡದ ನೆಲಸಮವಲ್ಲ.

- ಪ್ರಸ್ತುತದಲ್ಲಿ ಕರ್ನಾಟಕ ಸರ್ಕಾರವು ಅನುದಾನ ನೀಡುತ್ತಿರುವ ರಾಜ್ಯದ **ಏಕೈಕ ಗ್ಯಾಲರಿ** ವೆಂಕಟಪ್ಪ ಗ್ಯಾಲರಿ. ಕಲಾಸಮುದಾಯವು ಇನ್ನೂ ಹೆಚ್ಚಿನ ಇಂತಹ ಗ್ಯಾಲರಿಗಳನ್ನು ಕರ್ನಾಟಕದಾದ್ಯಂತ ಆರಂಭಿಸುವಂತೆ ಅನೇಕ ಬಾರಿ ಸರ್ಕಾರವನ್ನು ಒತ್ತಾಯಿಸಿದೆ. ನಾಡಿನ ಪ್ರತಿಭೆಯ ಪ್ರದರ್ಶನಕ್ಕೆ ಇದು ಅತ್ಯಗತ್ಯವಾಗಿರುತ್ತದೆ. ವ್ಯಾಗ್ ಗ್ಯಾಲರಿಯ ಪುನರ್ ನಿರ್ಮಾಣಕ್ಕೆಂದು ಕಾಯ್ದಿರಿಸಲಾಗಿರುವ ೨೦ ಕೋಟಿ ಹಣವನ್ನು ಬದಲಿಗೆ ಈ ಕೆಳಕಂಡಂತೆ ವ್ಯಯ ಮಾಡಬಹುದಾಗಿದೆ:

- ೧. ಪ್ರಸ್ತುತ ವೆಂಕಟಪ್ಪ ಗ್ಯಾಲರಿಯನ್ನು ಸಂಸ್ಕರಿಸಿ, ರಿಪೇರಿ ಮಾಡಲು,

- ೨. ಇರುವ ಗ್ಯಾಲರಿಗೇ ಎರಡು ಅಂತಸ್ತುಗಳನ್ನು ಸೇರ್ಪಡೆ ಮಾಡಲು; ಹಾಗೂ

- ಕರ್ನಾಟಕದ ಮತ್ತೊಂದು ಜಿಲ್ಲೆಯಲ್ಲಿ ಗ್ಯಾಲರಿಯೊಂದನ್ನು ನಿರ್ಮಿಸಲು. ದಾವಣಗೆರೆ ಇದಕ್ಕೆ ಸೂಕ್ತವಾದ ತಾಣವೆನಿಸುತ್ತದೆ.

**ವೆಂಕಟಪ್ಪ ಗ್ಯಾಲರಿಯನ್ನು ಪುನಶ್ಚೇತನಗೊಳಿಸಲು, ಎಲ್ಲರನ್ನೂ ಒಳಗೊಳ್ಳುವ ತಾಣವನ್ನಾಗಿಸಲು, ಪಾರದರ್ಶಕ ಹಾಗೂ ಪ್ರಜಾಪ್ರಭುತ್ವವಾದಿ ನಿಲುವಿನನ್ವಯ ಕಲಾಸಮುದಾಯದೊಂದಿಗೆ ಸರ್ಕಾರವು ಕೈಗೂಡಿಸಲಿ ಎಂದು ಮತ್ತೊಮ್ಮೆ ಈ ಮೂಲಕ ಕೋರಿಕೊಳ್ಳುತ್ತೇವೆ**.

■ **ವೆಂಕಟಪ್ಪ ಆರ್ಟ್ ಗ್ಯಾಲರಿ ಫೋರಂ** (**ವ್ಯಾಗ್ ಫೋರಂ**)

vagforum@gmail.com

www.vagforumblog.wordpress.com

Contact Nos: 98802 82402, 94481 32322, 9880 165 700

ಹೆಚ್ಚಿನ ಮಾಹಿತಿಗಾಗಿ, #savevag ಮತ್ತು http://vagforum.in ಭೇಟಿ ನೀಡಿ.